**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ** 101/2019 **CW**–13 **PW**–8

**ಸಾಕ್ಷಿಯನ್ನು ದಿಃ 04.03.2026 ರಂದು ವಿಸಿ ಯಲ್ಲಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಕಾಂತರಾಜು ಹೆಚ್ ಎಂ |
| ತಂದೆಯ ಹೆಸರುಃ | ಮರಿಹೊನ್ನೇಗೌಡ |
| ವಯಸ್ಸುಃ | 48 ವರ್ಷ |
| ವೃತ್ತಿಃ | ಪಿ ಐ ಕರಾವಳಿ ಕಾವಲು ಪಡೆ ಉಡುಪಿ |
| ವಾಸ ಸ್ಥಳಃ | ಉಡುಪಿ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 10.10.2018 ರಿಂದ 16.12.2019 ರ ವರೆಗೆ ಚನ್ನರಾಯಪಟ್ಟಣದಲ್ಲಿ ವೃತ್ತ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10.12.2018 ರಂದು ನಾನು ಚಾಸಾ–12 ರವರಿಂದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದು ಪರಿಶೀಲಿಸಿರುತ್ತೇನೆ.

ದಿಃ 12.12.2018 ರಂದು ಚಾಸಾ–1 ರವರಿಂದ ಮುಂದುವರೆದ ಹೇಳಿಕೆ ಪಡೆದಿರುತ್ತೇನೆ. ಚಾಸಾ–1 ರವರು ಮದುವೆಯ ಲಗ್ನಪತ್ರಿಕೆ, ಮದುವೆಯ ಫೋಟೋಗಳು ಹಾಗೂ ಒಡವೆ ರಶೀದಿಗಳನ್ನು ಹಾಜರುಪಡಿಸಿರುತ್ತಾರೆ.

ಸಾಕ್ಷಿ ನಿಪಿ–3 ರಿಂದ ನಿಪಿ–7 ರ ದಾಖಲೆಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–3(ಎ) ಯಿಂದ ನಿಪಿ–7(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ–2 ರಿಂದ ಚಾಸಾ–5 ಮತ್ತು ಚಾಸಾ–10 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 29.12.2018 ರಂದು ಆರೋಪಿತರು ನಿರೀಕ್ಷಣಾ ಜಾಮೀನಿನ ಆದೇಶ ಪಡೆದು ಠಾಣೆಗೆ ಹಾಜರಾಗಿದ್ದು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ಸಾಕ್ಷಿ ಬಂಧಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ದಿಃ 05.01.2019 ರಂದು ಚಾಸಾ-6 ರಿಂದ ಚಾಸಾ-9 ರವರ ಹೇಳಿಕೆ ಪಡೆದಿರುತ್ತೇನೆ.

ಅದೇ ದಿನ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಚಾಸಾ-12 ರವರು ದಿಃ 04.06.2023 ರಂದು ಮೃತಪಟ್ಟಿದ್ದು, ಸದರಿಯವರು ಭಾಗಶಃ ತನಿಖೆಯನ್ನು ಕೈಗೊಂಡಿದ್ದು ಅವರ ಭಾತ್ಮು ತನಿಖೆಗೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಅವರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ.

ದಿಃ 06.12.2018 ರಂದು ಸಂಜೆ 7.30 ರ ಸಮಯದಲ್ಲಿ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಪಡೆದು ಮೊ. ಸಂಖ್ಯೆ 427/2018 ರಂತೆ ಪ್ರಕರಣವನ್ನು ದಾಖಲಿಸಿ ಪ್ರ ವ ವರದಿಯನ್ನು ತಯಾರಿಸಿ ಮೇಲಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

ಪ್ರ ವ ವರದಿಯನ್ನು ನಿಪಿ-9 ಎಂದು ಗುರುತಿಸಲಾಯಿತು.

ದಿಃ 07.12.2018 ರಂದು ಬೆಳಗ್ಗೆ 10.30 ರಿಂದ 11.15 ರ ಸಮಯದಲ್ಲಿ ಚಾಸಾ-1 ರವರು ಸ್ಥಳವನ್ನು ತೋರಿಸಿದ್ದು ಪಂಚರಾದ ಚಾಸಾ-10 ಮತ್ತು ಚಾಸಾ-11 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ನಂತರ ನಾನು ತನಿಖೆಯನ್ನು ಮುಂದುವರೆಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಜೆ ಡಿ ರವರಿಂದ ಃ</u>**

ಚಾಸಾ-12 ರವರಿಂದ ನಾನು ಪ್ರ ವ ವರದಿ ಮತ್ತು ದೂರನ್ನು ಪಡೆದಿರುತ್ತೇನೆ. ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರ ದಾಖಲೆಯಲ್ಲಿ

ಎಸ್ಟಿಮೇಟ್ ಎಂದು ನಮೂದು ಇದೆ ಎಂದರೆ ಸರಿ. ಸದರಿ ರೂಪ ಜ್ಯುಯಲರ್ ್ಸ ಅಂಗಡಿಯ ಮಾಲೀಕರನ್ನು ವಿಚಾರಣೆ ಮಾಡಿಲ್ಲ. ನಾನು ಮತ್ತು ಚಾಸಾ–1 ರವರು ಈ ಪ್ರಕರಣಕ್ಕಾಗಿ ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ–2 ರಿಂದ ಚಾಸಾ–4, ಚಾಸಾ–6 ರಿಂದ ಚಾಸಾ–9 ಮತ್ತು ಚಾಸಾ–10 ರವರ ಹೇಳಿಕೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ತನಿಖೆಯನ್ನು ಸರಿಯಾದ ರೀತಿಯಲ್ಲಿ ಕೈಗೊಳ್ಳದೇ 2, 3 ಮತ್ತು 5ನೇ ಆರೋಪಿತರು ಬೆಂಗಳೂರಿನಲ್ಲಿ ವಾಸವಿದ್ದರು ಒಟ್ಟಿಗೆ ಇದ್ದರು ಎಂದು ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತನಿಖೆಯಲ್ಲಿ ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಭೀತಾಗಿಲ್ಲ ಎಂದು ಕಂಡುಬಂದಿದ್ದರೂ ಠಾಣಾ ಅಂಕಿಅಂಶಕ್ಕೋಸ್ಕರ ತನಿಖೆಯನ್ನು ಕೈಗೊಂಡು ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**